ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 5, November-December 2023, Pp. 95-99
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಜನಪದ ಮಹಿಳಾ ಸಾಹಿತ್ಯ

**ಡಾ. ತ್ರಿವೇಣಿ**
ಸಹ ಪ್ರಾಧ್ಯಾಪಕರು, ಶ್ರೀ ಡಿ.ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು.

***Abstract:***
*ಶ್ರಮಜೀವಿಗಳ ಅನುಭವ ಸಂಪತ್ತಿನ ಹಿನ್ನೆಲೆಯಲ್ಲಿ ಮೂಡಿಬಂದಿರುವ ಅಮೂಲ್ಯವಾದ ಜ್ಞಾನನಿಧಿಯೇ ಜಾನಪದ ಸಾಹಿತ್ಯ. "ಜಾನಪದ ಸಂಪ್ರದಾಯ ಒಂದು ಜನ ಸಮುದಾಯದ ಸಮಷ್ಠಿ ಸೃಷ್ಠಿ. ಸಾಮಾಜಿಕ ಜೀವನದ ಸಂಕೇತ, ರಾಷ್ಟ್ರೀಯ ಸಂಸ್ಕೃತಿಯ ತಾಯಿ ಬೇರು; ಅದು ಜನಸಾಮಾನ್ಯದ ಶ್ರುತಿಯೂ ಅಹುದು ಸ್ಮೃತಿಯು ಅಹುದು."* [1] *ಜನಸಾಮಾನ್ಯರ ದೈನಂದಿನ ದಂದುಗದ ನಾನಾ ಮಜಲುಗಳು ಇಲ್ಲಿ ಹಾಡು, ಕತೆ, ಗಾದೆ, ಲಾವಣಿ ಮುಂತಾಗಿ ಹೊರಹೊಮ್ಮಿವೆ. ಎಂತಲೇ ಜನಸಮುದಾಯದ ಸಕಲ ಕಷ್ಟಗಳ ಭಾರವನ್ನು ಹೆಚ್ಚೇ ಎಂಬಷ್ಟು ಹೊತ್ತಿರುವ ಹೆಣ್ಣು ಇಲ್ಲಿ ಮನದೆರೆದು ಮಾತಾಡಿದ್ದಾಳೆ. ತನ್ನ ಮನದಾಳದ ಭಾವನೆಗಳಿಗೆ ಹೆರುವ–ಹೊರುವ, ತೂರುವ–ಕೇರುವ, ಬೀಸುವ–ಕುಟ್ಟುವ ಮುಂತಾಗಿ ಅನೇಕ ಸಂದರ್ಭದಲ್ಲಿ ರೂಪು ನೀಡಿದ್ದಾಳೆ. ಪುರುಷನಿಗೆ ಹೆಗಲೆಣೆಯಾಗಿ ದುಡಿಯುತ್ತಾ, ಮನೆವಾಳ್ತೆಯೊಟ್ಟಿಗೆ ಮಕ್ಕಳನ್ನೂ ಹೆತ್ತು ಹೊತ್ತು ಬೆಳಸುವ ಜವಾಬ್ದಾರಿಯನ್ನು ಹೊತ್ತಿರುವ ಹೆಣ್ಣಿನ ಮನದಾಳದ ಆಶಯಗಳು ಒಂದು ಪರಿಮಿತಿಯಲ್ಲಾದರೂ ಇಲ್ಲಿ ಅಭಿವ್ಯಕ್ತಗೊಂಡಿವೆ. ನೋವು, ನಲಿವು, ಸಿಟ್ಟು, ಹತಾಶೆ, ದಿಟ್ಟತನ, ಕಾಮ, ಪ್ರೇಮ, ದಾಂಪತ್ಯ ಮುಂತಾಗಿ ಆಕೆಯ ಭಾವನೆಗಳೆಲ್ಲ ಈ ಸಾಹಿತ್ಯದ ಅಂತಸ್ಸತ್ವವೆಂಬಂತೆ ಹರಳುಗಟ್ಟಿವೆ. ಈ ಜನಪದ ಸಾಹಿತ್ಯದ ಪ್ರಮುಖ ಟಿಸಿಲುಗಳಾದ ಕಥೆ, ಗಾದೆ, ಗೀತೆ, ಒಗಟು, ಲಾವಣಿಗಳೇ ಮೊದಲಾದ ಸೃಜನಶೀಲ ರಚನೆಗಳೆಲ್ಲ ಬಹುಪಾಲು ಹೆಣ್ಣಿನೊಡಲಾಳದಿಂದಲೆ ಮೂಡಿಬಂದಿವೆ. ಹೀಗಾಗಿ ಮಹಿಳೆಯರ ಬದುಕಿನ ನಾನಾ ಮಜಲುಗಳನ್ನು ಗ್ರಹಿಸಲು ಜಾನಪದ ಸಾಹಿತ್ಯವು ಪ್ರಮುಖ ಆಕರವಾಗಿದೆ.*

***Keywords:*** *ಜನಪದ ಗೀತೆಗಳು, ಜನಪದ ಸಾಹಿತ್ಯ, ಮಹಿಳೆ, ಮಹಿಳಾ ಸಾಹಿತ್ಯ.*

**ಪೀಠಿಕೆ**

ಮೌಖಿಕ ಪರಂಪರೆಯಲ್ಲಿ ಜೀವಂತವಾಗಿರುವ ಜನಪದ ಸಾಹಿತ್ಯದಲ್ಲಿ ಜೀವನಾನುಭವವು ಘನೀಕೃತಗೊಂಡಿದೆ. ಜನಪದ ಗೀತೆಗಳು, ಕಥನ ಕಾವ್ಯಗಳು, ಕಥೆಗಳು, ಲಾವಣಿಗಳು, ಗಾದೆ, ಒಗಟುಗಳೆ ಮೊದಲಾದ ಪ್ರಕಾರಗಳು ಹೆಣ್ಣು ಬದುಕಿನ ಒಳಲೋಕವನ್ನು ತೆರೆದಿಡುವ ಪ್ರಮುಖ ಆಕರಗಳಾಗಿವೆ. ಕನ್ನಡದ ಸಂದರ್ಭದಲ್ಲಿ ಜಾನಪದ ಸಾಹಿತ್ಯ ಸಂಗ್ರಹದ ಆರಂಭ ಕಾಲಘಟ್ಟದಲ್ಲಿ ಗರತಿಯರ ಹಾಡು, ಹೆಣ್ಣುಮಕ್ಕಳ ಪದಗಳು, ಹೆಂಗಸರ ಹಾಡುಗಳು ಎಂದು ಮಹಿಳಾ ಜಾನಪದ ಸಾಹಿತ್ಯವನ್ನು ನೋಡಲಾಯಿತು. ನಂತರದ ದಿನಗಳಲ್ಲಿ ಮಹಿಳಾ ಜಾನಪದವೆನ್ನುವುದು ಗ್ರಾಮೀಣ ಮಹಿಳೆ ಸೃಷ್ಟಿಸಿದ ಸಾಹಿತ್ಯವೆಂದಷ್ಟೇ ನೋಡದೆ, ಅದರಲ್ಲಿನ ಸ್ತ್ರೀನಿಷ್ಠ ಮೌಲ್ಯಗಳನ್ನು ಗುರುತಿಸಿ, ಆ ಮೂಲಕ ಅವಳ ಅಸ್ಮಿತೆಯನ್ನು ಅರಿಯುವ ಕೆಲಸ ನಡೆಯಲಾರಂಭಿಸಿತು. ಸಾಮಾಜಿಕ ಸಂದರ್ಭಗಳು

***Please cite this article as:*** ತ್ರಿವೇಣಿ. (2023). ಜನಪದ ಮಹಿಳಾ ಸಾಹಿತ್ಯ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(5), 95–99.

ಮಹಿಳೆಯ ಹಿನ್ನೆಲೆಯಲ್ಲಿ ಹೇಗೆ ಸ್ಪಂದಿಸಿವೆ ಎಂಬುದನ್ನು ಗುರುತಿಸುವ ಅನೇಕ ಅಧ್ಯಯನಗಳು ನಡೆದವು. ಹೀಗೆ ಮಹಿಳಾ ಜಾನಪದ ಸಾಹಿತ್ಯವನ್ನು ಸ್ತ್ರೀನಿಷ್ಠ ತಾತ್ವಿಕತೆಯ ಹಿನ್ನೆಲೆಯಲ್ಲಿ ವಿಶ್ಲೇಷಣೆ ನಡೆಸುವುದನ್ನೇ ಮಹಿಳಾ ಜಾನಪದ ಸಾಹಿತ್ಯ ಎಂದು ಕರೆಯಲಾಗುತ್ತದೆ.

ಜಾನಪದ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ಮಹಿಳೆ ಹಲವು ನೆಲೆಯಲ್ಲಿ ಅಭಿವ್ಯಕ್ತಿ ಪಡೆದಿದ್ದಾಳೆ. ಮುದ್ದಿನ ಮಗಳಾಗಿ, ಆದರ್ಶ ಸತಿಯಾಗಿ, ವಾತ್ಸಲ್ಯದ ತಾಯಿಯಾಗಿ ಕುಟುಂಬದ ಸರ್ವತೋಮುಖ ಏಳಿಗೆಯ ಹೊಣೆಗಾರಳಾಗಿ ಆಕೆಯ ಬದುಕು ತೆರೆದುಕೊಂಡಿದೆ. ಎಂತಲೇ ಅವಳ ಬದುಕಿನ ನಾನಾ ಮಜಲುಗಳ ಕೈಗನ್ನಡಿಯಾಗಿ ಜಾನಪದ ಸಾಹಿತ್ಯವು ಕಂಡುಬರುತ್ತದೆ. ಜನಪದ ವೇದವೆಂದೇ ಪರಿಗಣಿತವಾಗಿರುವ ಗಾದೆಗಳು ಮಾನವನ ಮಾತಿನ ಪ್ರಬಲ ಅಸ್ತ್ರಗಳು. ಸಂಸ್ಕೃತಿವಾಹಕಗಳಾಗಿ ಪ್ರಮುಖ ಪಾತ್ರವಹಿಸುವ ಬಹುಪಾಲು ಗಾದೆಗಳು ಹೆಣ್ಣನ್ನು ಪ್ರಶ್ನಿಸುವ, ತಿದ್ದುವ ಕೆಲಸವನ್ನು ಮಾಡುತ್ತವೆ. 'ಹೆಂಗಸಿಗ್ಯಾಕೆ ಊರ ಉಸಾಬರಿ' ಎಂದು ಮನೆವಾಳ್ತನಕ್ಕೆ ಅವಳನ್ನು ಮೀಸಲಾಗಿಸಿದರೂ, ಹೆಣ್ಣು ಅಂತಹ ಆಲೋಚನೆಯನ್ನು ವಿರೋಧಿಸುವ, ಅದರಾಚೆಗೂ ತನ್ನ ಬದುಕನ್ನು ವಿಸ್ತರಿಸಿಕೊಳ್ಳುವ ಸಕಾರಾತ್ಮಕ ನೆಲೆಯನ್ನು ಗಾದೆಗಳು ಅಭಿವ್ಯಕ್ತಗೊಳಿಸುತ್ತವೆ. ಬಹುಪಾಲು ಜನಪದ ಕಥೆಗಳ ರಚನೆಕಾರರು ಮಹಿಳೆಯರೇ ಆಗಿದ್ದು, ಹೆಣ್ಣಿನ ಜೀವನ ವಿಧಾನ, ಆಲೋಚನೆಗಳನ್ನು ಅರಿಯಲು ಕಥೆಗಳು ಬಹುಮುಖ್ಯ ಆಕರಗಳಾಗಿವೆ. ಕಥನಗೀತೆಗಳು ಹಾಗೂ ಅನೇಕ ಮಹಾಕಾವ್ಯಗಳು ಕೂಡ ಸ್ತ್ರೀಕೇಂದ್ರಿತ ರಚನೆಗಳಾಗಿದ್ದು, ಸಹಗಮನ ಮಾಡಿದ, ಆತ್ಮಾಹುತಿ ಮಾಡಿಕೊಂಡ, ಬಲಿಹೋದ, ಛಲವಂತೆಯರಾದ ವಿವಿಧ ನೆಲೆಯ ಮಹಿಳೆಯರ ಬದುಕನ್ನು ತೆರೆದಿಡುತ್ತವೆ.

ಜಾನಪದ ಸಾಹಿತ್ಯದ ವಿಶಿಷ್ಟ ಪ್ರಕಾರವಾದ ಜನಪದಗೀತೆಗಳಲ್ಲಿ ಮಹಿಳೆಯು ವೈವಿಧ್ಯಮಯವಾಗಿ ರೂಪುತಳೆದಿದ್ದಾಳೆ. ಆದ್ದರಿಂದಲೇ ಸಿಂಪಿ ಲಿಂಗಣ್ಣ ಅವರು ಈ ಹಾಡುಗಳನ್ನು 'ಸಂಸಾರ ಸಂಹಿತೆಗಳು, ಸಂಸ್ಕೃತಿ ಮೀಮಾಂಸೆಯ ಭಾಷ್ಯಗಳು' ಎನ್ನುತ್ತಾರೆ. ಜನಪದ ಗೀತೆಗಳ ಒಡನಾಟವಿಲ್ಲದೆ ಹೆಣ್ಣುಮಕ್ಕಳು ಯಾವ ಕಾರ್ಯಕ್ಕೂ ಕೈ ಹಚ್ಚಿದವರಲ್ಲ. ನಾಟಿ ಹಾಕುವುದು, ಬಿತ್ತುವುದು, ಬೀಸುವುದು, ಕುಟ್ಟುವುದು, ಕಡೆಯುವುದು, ತೊಟ್ಟಲು ತೂಗುವುದು, ಹಚ್ಚೆ ಹೊಯ್ಯುವುದು ಮುಂತಾದವುಗಳು ನಡೆಯುತ್ತಿರುವಾಗಲೇ ಅದಕ್ಕೆ ಪೂರಕವಾಗಿ ಗೀತೆಗಳನ್ನು ಗುನುಗುತ್ತಿದ್ದವಳು ಹೆಣ್ಣು. ಬೆಳಗಾಗುತ್ತಲೇ ತನ್ನ ದೈನಂದಿನ ಕಾಯಕಕ್ಕೆ ಕೈಹಚ್ಚುವ ಮುನ್ನ ದೇವರನ್ನು ನೆನೆಯುತ್ತಾ, ಅಲ್ಲಿಂದಲೇ ಗೀತೆಗಳನ್ನು ಹಾಡುವುದರೊಟ್ಟಿಗೆ ಒಗೆತನವನ್ನು ಪ್ರಾರಂಭಿಸುತ್ತಾಳೆ.

***ಏಳುತಾಲೆ ಎದ್ದು ಯರ‍್ಯಾರ ನೆನೆಯಾಲಿ***
***ಎಳ್ಳುಜೀರಿಗೆ ಬೆಳೆಯೋಳಾ ಭೂಮಿತಾಯ***
***ಎದ್ದೊಂದು ಗಳಿಗೆ ನೆನದೇನು***

ತನ್ನ ದಿನನಿತ್ಯದ ಸಂಸಾರದ ಜಂಜಾಟಕ್ಕೆ ಅಣಿಯಾಗುವ ಹೆಣ್ಣು ಭೂಮಿತಾಯಿಯನ್ನು ಎದ್ದೊಡನೆ ಸ್ಮರಿಸುತ್ತಾಳೆ. ಕೃಷಿ ಪ್ರಧಾನವಾದ ತನ್ನ ಬದುಕಿಗೆ ಕಾರಣೀಭೂತಳಾದ ಭೂಮಿತಾಯಿಗಿಂತಲೂ ಮಿಗಿಲಾದ ದೇವರು ಬೇರಾರಿಲ್ಲ. ಬಿತ್ತಿ ಬೆಳೆಯಲು ಆಕರವಾದ ಭೂಮಿಯೇ ಅವಳ ಆರಾಧ್ಯ ದೈವವಾದ್ದರಿಂದ ಆ ಜೀವದಾತೆಯನ್ನು ಸ್ಮರಿಸುತ್ತಾಳೆ. ಜನಪದ ಹೆಣ್ಣುಮಗಳು ಎದ್ದವಳೇ ಬೀಸುವ ತನ್ನ ಕಾಯಕದಿಂದ ದಿನವನ್ನು ಪ್ರಾರಂಭಿಸುತ್ತಾಳೆ. ಬೀಸುವ ಶ್ರಮ ಮರೆಯಲೆಂಬಂತೆ ಆಕೆ ಗೀತೆಗಳಿಗೆ ಮೊರೆಹೋಗುತ್ತಾಳೆ. ಈ ಬೀಸುವ ಕಲ್ಲು ಅವಳ ನೋವು–ನಲಿವಿನ ಅಭಿವ್ಯಕ್ತಿಗೆ ಕೇವಲ ಸಾಧನ ಮಾತ್ರವಲ್ಲ; ಜ್ಞಾನವನ್ನು ನೀಡುವ ಸರಸ್ವತಿ. 'ಸುಮ್ಮನೆ ಬೀಸಿದರೆ ಬೀಳಾದೇ ಈ ಕಲ್ಲು ನಾಗಸೊರದಂತೆ ದನಿ ಎತ್ತಿ ಹಾಡಿದರೆ' ಜಲ್ಲ ಜಲ್ಲನೆ ಉದುರುತ್ತದೆ ಎಂದು ನಂಬಿದವಳು ಹೆಣ್ಣು.

ಜಾನಪದ ಸಾಹಿತ್ಯದಲ್ಲಿ ಹೆಣ್ಣಿನ ಕುಟುಂಬ ಸಂಬಂಧೀ ಎರಡು ಭಾವಪ್ರಪಂಚಗಳೆಂದರೆ ತವರು

ಹಾಗೂ ಗಂಡನ ಮನೆ. ಅದರಲ್ಲೂ ತವರೆಂದರೆ ಹಿಗ್ಗೋ ಹಿಗ್ಗು. 'ಹಾಲುಂಡ ತವರು ಕರಕಿಯ ಕುಡಿಹಂಗೆ ಹಬ್ಬಲಿ' ಎಂದು ಹಾರೈಸುತ್ತಲೇ ಇರುವವಳು. ಜನಪದ ಮಹಿಳೆಗೆ ತಾಯಿ ಕೇವಲ ಹೆತ್ತವಳಷ್ಟೇ ಅಲ್ಲ, ಕಣ್ಣಿಗೆ ಕಾಣುವ ದೇವರು. ಹೊತ್ತು ಹೆತ್ತು ಸಾಕಿ ಸಲಹಿದ ತಾಯಿ ಎಲ್ಲಕ್ಕೂ ಮಿಗಿಲಾದವಳು. ಮಮತೆಯ ಮಡಿಲಲ್ಲೇ ಬೆಳೆದ ಮಗಳಿಗೆ ಅನುಗಾಲವೂ ಅವಳದೇ ಚಿಂತೆ.

***ಯಾರು ಆದರೂ ಹೆತ್ತ ತಾಯಂತೆ ಆದಾರೋ***
***ಸಾವಿರ ಸೌದೆ ಒಲೆಯಲ್ಲಿ ಉರಿದಾರೂ***
***ದೀವಿಗೆಯಂತೆ ಬೆಳಕುಂಟೆ***

ಉಳಿದೆಲ್ಲಾ ಸಂಬಂಧಗಳಿಗಿಂತಲೂ ತಾಯಿಯ ಸಂಬಂಧವು ಎಷ್ಟು ಮಹತ್ತರವಾದುದು ಎಂಬುದನ್ನು ಈ ತ್ರಿಪದಿ ಕಟ್ಟಿಕೊಡುತ್ತದೆ. ಸಾವಿರ ಸೌದೆ ಉರಿದರೂ ಅದು ದೀಪದ ಬೆಳಕಿನಂತೆ ಅಪ್ಯಾಯಮಾನವಲ್ಲ. ಸಾವಿರ ಸೌದೆಯ ಉಪಯೋಗ ಬಹಳವಿರುವಂತೆ, ಉಳಿದ ಸಂಬಂಧಗಳೂ ಮುಖ್ಯ. ಆದರೆ ತಾಯಿ ಸಂಬಂಧವು ದೀವಿಗೆಯಂತೆ ಬೆಳಕನ್ನು ನೀಡುತ್ತಲೇ ಮಾರ್ಗತೋರುವಂಥದ್ದು. ಇದು ಸೌದೆಯಂತೆ ಝಳವೂ ಅಲ್ಲ, ವಿನಾಶಕಾರಿಯೂ ಅಲ್ಲ. ಸದಾ ತನ್ನ ಕಾಂತಿಯ ಬೆಳಗಿನಿಂದ ಮನದ ಕತ್ತಲೆ ಹೋಗಲಾಡಿಸುವ, ನೋವ ಮರೆಸಿ ಆನಂದ ನೀಡುವ ದೀವಿಗೆಯಂತೆ ತಾಯಿಯ ಪ್ರೀತಿ ಎನ್ನುತ್ತದೆ ಈ ತ್ರಿಪದಿ.

ಜನಪದರ ಬದುಕಿನ ಆಶಾಕಿರಣವೆಂದರೆ, ವಂಶಬೆಳಗುವ ಮಕ್ಕಳನ್ನು ಹೊಂದುವುದು. ಸಾಮಾಜಿಕ ವ್ಯವಸ್ಥೆಯ ದೃಷ್ಟಿಯಲ್ಲಿ ಸ್ತ್ರೀಯರ ಪರಮಗುರಿ ಗಂಡನ ಮನೆಗೆ ಕುಲೋದ್ಧಾರಕನನ್ನು ಹಡೆದುಕೊಡುವುದು. 'ಹೆಣ್ಣು ಹುಟ್ಟಿದ ಮನಿ ಹೆಗ್ಗಣತ್ತಿದಾಂಗ' ಎಂದು ಭಾವಿಸುವ ಜನಪದರು ಹೆಣ್ಣು ಮಗುವಿನ ಹುಟ್ಟನ್ನು ಹೆಚ್ಚು ಬಯಸದೆ, 'ಗಂಡಸುಮಗ ಗಜಭೀಮ'ನನ್ನು ನಿರೀಕ್ಷಿಸುವವರು.

***ಗಂಡು ಸಂತಾನ ಒಂಬತ್ತು ಕೊಡು ಸ್ವಾಮಿ***
***ಒಂಬತ್ತರ ನಡುವೆ ಕಲಶಕೆ ಕೈಮುಗಿಯುವುದಕೆ***
***ರಂಭೆ ಒಬ್ಬಳನು ಕೊಡು ಸ್ವಾಮಿ***

ಎಂಬಲ್ಲಿ ಪುರುಷಪ್ರಧಾನ ಸಮಾಜದ ಆಶಯವು ಅಭಿವ್ಯಕ್ತಗೊಂಡಿದೆ. ಗಂಡಾದರೆ ವಂಶದ ಕೀರ್ತಿ ಬೆಳಗುವುದೆಂಬ ಭಾವವಿದ್ದರೂ ಹೆಣ್ಣು ಬೇಕೆಂಬ ಹಂಬಲವೂ ಇದೆ. ಒಟ್ಟಾರೆಯಾಗಿ ಮಕ್ಕಳು ಅವಳ ಬದುಕಿಗೆ ಸಾರ್ಥಕ್ಯ ಒದಗಿಸುವವರು. 'ಕೆಟ್ಟರೆ ಕೆಡಲಿ ಮನಿಗೆಲಸ ... ಮಕ್ಕಳಿರಲಿ ಮನಿತುಂಬ' ಎಂಬಲ್ಲಿ ತನ್ನ ಬಾಳಿನ ಎಲ್ಲಾ ಕ್ಲೇಶಗಳನ್ನು ಮಗುವನ್ನು ನೋಡಿ ಮರೆಯಬಲ್ಲೆನೆಂಬ ಆನಂದ, ಆತ್ಮವಿಶ್ವಾಸವಿದೆ.

***ಅಳುವ ಕಂದನ ತುಟಿಯು ಹವಳದ ಕುಡಿಹಂಗ***
***ಕುಡಿಹುಬ್ಬು ಬೇವಿನೆಸಳಂಗ ಕಣ್ಣೋಟ***
***ಶಿವನ ಕೈಯಲಗು ಹೊಳೆದಂಗ***

'ಬಾಲಕರಿಲ್ಲದ ಬಾಲಿದ್ಯಾತರ ಜನ್ಮ ಬಾಡೀಗಿ ಎತ್ತು ದುಡಿದ್ಹಂಗ' ಎಂದು ಮಕ್ಕಳಿಲ್ಲದ ಬದುಕು ಬಂಧನವೆಂದೇ ಬಗೆಯುತ್ತಾಳೆ. ಸಂತಾನ ಪಡೆದವರಿಗೇ ಮೋಕ್ಷ, ಮಕ್ಕಳನ್ನು ಹಡೆಯುವುದರಲ್ಲೇ ಸಾರ್ಥಕ್ಯವಿದೆ ಎಂಬ ಸಾಮಾಜಿಕ ನಂಬಿಕೆಯಿಂದ ಹೆಣ್ಣು ಸಾಕಷ್ಟು ನಲುಗಿಹೋಗಿದ್ದಾಳೆ. ಆದ್ದರಿಂದಲೇ ಆಕೆ 'ಕಂದನ ಕೊಡು ಶಿವನೆ ಬಂಧನ ಪಡಲಾರೆ' ಎಂದು ಪ್ರಾರ್ಥಿಸುತ್ತಾಳೆ. ಸಮಾಜದಲ್ಲಿ ಹೆರದ ಹೆಣ್ಣಿಗಿರುವ ಅಪಮಾನ, ಅವಮಾನ ಸಹಿಸಲಾರದೆ 'ಬಂಜೆಂಬ ಶಬುದ ಹೊರಲಾರೆ', 'ಸಂಜೇಲಿ ಹುಟ್ಟಲಿ ಮುಂಜಾನೆ ಸಾಯಲಿ' ಎಂದು ಮೊರೆಯಿಡುವ ಆಕೆ ಅಂತಹ ಬದುಕು, ದುಡಿಮೆ ಎಲ್ಲವೂ ವ್ಯರ್ಥ ಎಂದು ದುಃಖಿಸುತ್ತಾಳೆ. ಈ ತ್ರಿಪದಿ ಅಂದಿನ ಸಾಮಾಜಿಕ ವ್ಯವಸ್ಥೆಗಿಡಿದ ಕನ್ನಡಿಯಂತಿದೆ.

ಮಕ್ಕಳನ್ನು ಪಾಲನೆ ಪೋಷಣೆ ಮಾಡಿ ಮರಣದ ತನಕವೂ ಕುಟುಂಬದ ಎಲ್ಲಾ ಜವಾಬ್ದಾರಿ ಹೊತ್ತು ಬಾಳುವೆ ಮಾಡುವುದೇ ಜನಪದ ಮಹಿಳೆಯ ಬದುಕಿನ ಧ್ಯೇಯವಾಗಿದೆ. ಆ ನಡುವೆ ಹುಟ್ಟಿದ ಮನೆಗೂ, ಕೊಟ್ಟಮನೆಗೂ ಕೀರ್ತಿ ತರುವ

ಜವಾಬ್ದಾರಿ ಹೊತ್ತೇ ಬದುಕುವ ಅವಳ ಮನದ ತುಮುಲಗಳು ಹಲವು. ಸದಾ ತವರಿನ ನೆನಪನ್ನು ಹೊತ್ತು ಗಂಡನ ಮನೆಯಲ್ಲಿ ಸಂಸಾರ ಸಾಗಿಸುವ ಹೆಣ್ಣಿಗೆ ತಾಯಿ–ತವರು ಆಪ್ಯಾಯಮಾನವಾದವು. ತನ್ನ ಬಾಣಂತನ ಮುಗಿಸಿ ಮತ್ತೆ ಗಂಡನ ಮನೆಗೆ ಹೊರಡುವಾಗಿನ ಈ ತ್ರಿಪದಿ ಇಂಥದ್ದೇ ಆಶಯವುಳ್ಳದ್ದು.

*ತೊಟ್ಟಿಲ ಹೊತ್ಕೊಂಡು ತರ್ಬಣ್ಣ ಉಟ್ಕೊಂಡು*
*ಅಪ್ಪ ಕೊಟ್ಟೆಮ್ಮೆ ಹೊಡಕೊಂಡು ತೌರೂರ*
*ತಿಟ್ಟತ್ತಿ ತಿರುಗಿ ನೋಡ್ಯಾಳು*

ತವರಿನ ಬಣ್ಣ, ಅಪ್ಪಕೊಟ್ಟ ಎಮ್ಮೆ, ತಿಟ್ಟು–ಇವುಗಳೆಲ್ಲವೂ ಸ್ವಭಾವೋಕ್ತಿಗಳೇ ಆದರೂ ಧ್ವನಿಸುವ ಧ್ವನಿ ಮಾತ್ರ ಅನನ್ಯ. ತನ್ನಾದಿಯಾಗಿ ಉಟ್ಟಿದ್ದು, ಹಿಡಿದದ್ದು, ಹೊತ್ತಿದ್ದು ಎಲ್ಲವೂ ತವರುಮಯ. ಆದರೆ ಅಂತಹ ತವರನ್ನು ದಿಣ್ಣೆ ಮೇಲೇರಿ ನೋಡುವ ನೋಟದಲ್ಲಿ ಅಡಕವಾಗಿರುವ ಭಾವನೆಗಳನ್ನು ಹಿಡಿದಿಡಲಾದೀತೆ? ಮಾತಿಗೆ ನಿಲುಕದ ಆ ಮನೋವೇದನೆಯನ್ನು ತಿಟ್ಟತ್ತಿ ತಿರುಗಿ ನೋಡುವ ನೋಟದಲ್ಲಿ ಅಡಗಿಸಿದೆ ಈ ತ್ರಿಪದಿ.

ಮದುವೆಯಾಗಿ ಗಂಡನ ಮನೆಯಲ್ಲಿ ಅನುಭವಿಸಿದ ನೋವು–ನಲಿವುಗಳೆಲ್ಲವನ್ನೂ ಜಾನಪದ ಗೀತೆಗಳಲ್ಲಿ ಅಭಿವ್ಯಕ್ತಪಡಿಸಿದ್ದಾಳೆ. 'ಅರವತ್ತು ಗಂಗಾಳ ಬೆಳಗತೇನತ್ತಿ ಬೈಬ್ಯಾಡ, ತವರವರು ಸರಮುತ್ತ ಮಾಡಿ ಸಲುವ್ಯಾರ' ಎಂದು ಅನುಸರಿಸಿಕೊಂಡು ಬಾಳ್ವೆ ನಡೆಸುವವಳಿಗೆ ಆಶಾವಾದವೆಂದರೆ ಗಂಡನ ಅಪರಿಮಿತ ಪ್ರೇಮ.

*ಹಚ್ಚಡದ ಪದರಾಗ ಅಚ್ಚಮಲ್ಲಿಗೆ ಹೂವ*
*ಬಿಚ್ಚಿ ನನಮೇಲೆ ಒಗೆವಂಥ ರಾಯನ*
*ಬಿಟ್ಟ್ಯಾಗ ಬರಲಿ ಹಡೆದವ್ವ*

'ಗಂಜೀಯ ಕುಡಿದರು ಗಂಡನ ಮನೆ ಲೇಸು' ಎಂಬ ಮಾತು ಕೇಳೇ ಬೆಳೆದ ಜನಪದ ಹೆಣ್ಣುಮಗಳಿಗೆ ತನ್ನ ಆಸರು ಬೇಸರುಗಳಿಗೆಲ್ಲಾ ಕಿವಿಯಾದ ತನ್ನ ಗಂಡನೇ ಸರ್ವಸ್ವ. ಆತನ ಅನಂತ ಪ್ರೀತಿಯೆದುರು ತವರಿನ ಹಂಬಲವೇ ಇಲ್ಲವಾಗುತ್ತದೆ.

ಹೀಗೆ ಕುಟುಂಬದೊಳಗಡೆಯೇ ತನ್ನ ಬಹುಪಾಲು ಬದುಕನ್ನು ಸವೆಸುವ ಹೆಣ್ಣಿನ ಮನಸ್ಸಿನ ಒಳದನಿಗೆ ಕಿವಿಗೊಡವುದು ಬಹಳ ಮುಖ್ಯ. ಪುರುಷಾವಲಂಬಿತಳಾಗೇ ಬೆಳೆದವಳಿಗೆ ಗಂಡನ ಆಶ್ರಯವೂ ತಪ್ಪಿದರೆ ಬದುಕು ದುಸ್ತರವೆನಿಸುತ್ತದೆ. "ಹೆಣ್ಣಿನ ಸ್ವಭಾವ ನಡವಳಿಕೆಗಳೂ ಕೂಡ ಪುರುಷ ಪ್ರಧಾನ ಮೌಲ್ಯಗಳಿಂದ ಪ್ರೇರಿತವಾಗಿವೆ. ಅಡುಗೆಮನೆ ಹೆರಿಗೆಮನೆಗಳ ಬಂಧನದಲ್ಲಿಯೇ ಅವಳು ತನ್ನ ಜೀವಿತಾವಧಿಯ ಬಹುಕಾಲವನ್ನು ಕಳೆದಿದ್ದಾಳೆ. ಅತ್ತೆ ಮಾವರಿಗಂಜಿ ಸುತ್ತೇಳು ನೆರೆಗಂಜಿ ಮತ್ತೆ ಆಳುವ ದೊರೆಗಂಜಿ ನನ್ನ ಮಗಳೇ ಅತ್ತೆಯ ಮನೆ ಒಳಗೆ ಬಾಳವ್ವ ಎಂಬ ಉಪದೇಶವೇ ಅವಳ ಬಾಳ ಮಾರ್ಗದರ್ಶಿ. ಇದಕ್ಕೆ ತಪ್ಪಿ ನಡೆದಲ್ಲಿ ಅವಳ ಜೀವನದ ನೆಲೆತಪ್ಪುತ್ತಿತ್ತು."[2] ತನ್ನ ಬಗೆಗಿರುವ ಸಮಾಜದ ನಿರೀಕ್ಷೆಗಳಂತೆ ಬಾಳ್ವೆ ನಡೆಸುವಾಗ ಈ ಜನ್ಮದ ಜಂಜಾಟವೇ ಬೇಡವೆನಿಸಿಬಿಡುತ್ತದೆ.

*ಹೆಣ್ಣು ಆಗುವುದಕ್ಕಿಂತ ಮಣ್ಣು ಆಗೋದು ಲೇಸು*
*ಮಣ್ಣಿನ ಮ್ಯಾಲ ಮರವಾಗಿ, ಇದ್ದರೆ*
*ಬಂದವರಿಗೆಲ್ಲ ನೆರಳವ್ವ*

ಎಂದು ತನ್ನ ನಿರ್ಜೀವ ಬದುಕಿಗಿಂತ ಮರವಾಗಿ ನೆಮ್ಮದಿಯಿಂದ ಬದುಕಲು ಆ ಜೀವವು ಹವಣಿಸುತ್ತದೆ. ಇಲ್ಲಿ ಯಾವ ಪ್ರತಿಭಟನೆಯು ಕಾಣಸಿಗದಿದ್ದರೂ, ಸಮಾಜದಲ್ಲಿನ ಲಿಂಗಾಧಾರಿತ ನಿರೀಕ್ಷೆಗಳಿಂದ ಬದುಕು ಆಕೆಗೆ ಅಸಹನೀಯವೆನಿಸಿದೆ. ಹಾಗೆಂದು ಗೀತೆಗಳಲ್ಲಿ ಬರೀ ಹೆಣ್ಣಿನ ಗೋಳಷ್ಟೇ ದಾಖಲಾಗಿಲ್ಲ. 'ಬಿಡ್ತಿ ಬಿಡ್ತಿ ಎಂದು ಬಿಂಕದ ಮಾತೇನು, ಬಿಟ್ಟರೀ ರಾಣಿ ಹೆರ್ವಾಳಾ' ಎಂದು ಗರ್ವದ ಗಂಡನ ಬೆದರಿಕೆಗೆ ಅಂಜದೆ ದಿಟ್ಟತನ ತೋರುವ ಹೆಣ್ಣುಮಕ್ಕಳೂ ಕಾಣಸಿಗುತ್ತಾರೆ. ಸಾಂಪ್ರದಾಯಿಕ ಚೌಕಟ್ಟಿನಾಚೆಗೆ ಜಿಗಿದು, ತನ್ನ ಅಸ್ಮಿತೆಯನ್ನು ಉಳಿಸಿಕೊಳ್ಳುವ, ತನಗಾಗುತ್ತಿರುವ ಶೋಷಣೆಯನ್ನು ದಿಟ್ಟತನದಿಂದ ಎದುರಿಸುವ ಎದೆಗಾರಿಕೆಯ ಹೆಣ್ಣುಗಳೂ ಇಲ್ಲಿದ್ದಾರೆ. ಹೀಗೆ

ಜನಪದ ಸಾಹಿತ್ಯವು ಹೆಣ್ಣು ಬದುಕಿನ ವಿವಿಧ ಆಯಾಮಗಳ ಕೈಗನ್ನಡಿಯಾಗಿದೆ.

**ಕೊನೆಟಿಪ್ಪಣಿಗಳು**

1. ದೇ.ಜ.ಗೌ. (1967). ಮುನ್ನುಡಿ. **ಗ್ರಂಥ:** ಪರಮಶಿವಯ್ಯ. ಜೀ.ಶಂ., *ಜನಪದ ಸಾಹಿತ್ಯ ಸಮೀಕ್ಷೆ.* (ಪು.xi). ಕನ್ನಡ ಸಾಹಿತ್ಯ ಪರಿಷತ್ತು.
2. ಶಾಲಿನಿ ರಘುನಾಥ. (2003). ಜನಪದ ಸಾಹಿತ್ಯದಲ್ಲಿ ಸ್ತ್ರೀಮಾದರಿಗಳ ಶೋಧ. **ಗ್ರಂಥ:** ಸಂಧ್ಯಾರೆಡ್ಡಿ, ಕೆ.ಆರ್. (ಸಂ.). *ಮಹಿಳಾ ಜಾನಪದ.* (ಪು. 189). ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ.

**ಪರಾಮರ್ಶನ/ಆಕರ ಗ್ರಂಥಗಳು**


- ನೇತ್ರಾವತಿ ಕೆ.ವಿ. (2019). ಜಾನಪದ ಮತ್ತು ಮಹಿಳೆ. **ಗ್ರಂಥ:** ಸುಮಂಗಲಾ ಅತ್ತಿಗೇರಿ. (ಸಂ.). *ಜಾನಪದ ಮತ್ತು ಮಹಿಳೆ ಅನನ್ಯತೆಯ ನೆಲೆಗಳು.* ಎಸ್‌ಎಲ್‌ಎನ್ ಪಬ್ಲಿಕೇಷನ್.
- ರಾಮಚಂದ್ರೇಗೌಡ ಹಿ.ಶಿ. (2003). ಜನಪದ ಸಂಸ್ಕೃತಿಯಲ್ಲಿ ಹೆಣ್ಣು. **ಗ್ರಂಥ:** ರಾಮಚಂದ್ರೇಗೌಡ ಹಿ.ಶಿ. (ಪ್ರ.ಸಂ.) & ಸಂಧ್ಯಾರೆಡ್ಡಿ ಕೆ.ಆರ್. (ಸಂ.) (2003). *ಮಹಿಳಾ ಜಾನಪದ.* ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ.
- ಶಕುಂತಲಾ ಸಿದ್ಧರಾಮ ದುರಗಿ. (ಸಂ.) (2018). *ಜನಪದ ಮಹಿಳೆಯ ಜೀವಪರ ಧ್ವನಿ.* ಕನ್ನಡನಾಡು ಲೇಖಕರ ಮತ್ತು ಓದುಗರ ಸಹಕಾರ ಸಂಘ.